'ಶನ್ವಾರ ಹೋಗಿದ್ದೆ ಸಾರ್, ಡಾಕ್ಟರು ಇರ್ಲಿಲ್ಲ. ಅಲ್ಲಿದ್ದವನು ಔಸ್ದಿ ಕೊಟ್ಟ. ಏನೂ ಉಪ್ಯೋಗ ಆಗ್ಲಿಲ್ಲ. ಈವತ್ತು ಬೆಳಿಗ್ಗಿಂದ ಜೋರು ಉಸ್ರು ಬಿಡ್ತಿದೆ'

ಕೃಷ್ಣಪ್ಪ ಪಶು ಆಸ್ಪತ್ರೆಯ ಡಾಕ್ಟರಿಗೆ ಫೋನ್ ಮಾಡಿ ಸಾವಿತ್ರಿಯ ಹಸುವಿಗೆ ತೊಂದರೆಯಾಗಿರುವುದನ್ನು ತಿಳಿಸಿದರು. ತಾವೇ ಹೋಗಿ ನೋಡಿದ್ದರೆ ಚೆನ್ನಾಗಿತ್ತು ಎಂದರು. ಡಾಕ್ಟರ್ ಮೂರು ದಿನಗಳಿಂದ ರಜೆಯಲ್ಲಿದ್ದೆ. ತುಂಬಾ ಬ್ಯುಸಿಯಾಗಿದ್ದೇನೆ, ಬೈಕ್ ಬೇರೆ ಪಂಕ್ಚರ್ ಆಗಿದೆ ಎಂದರು. ಕೃಷ್ಣಪ್ಪ ನಾನೇ ಬರುತ್ತೇನೆ, ನನ್ನ ಬೈಕಲ್ಲೇ ಹೋಗೋಣ ಎಂದು ಒಪ್ಪಿಸಿದರು. ಹಸುವನ್ನು ಪರೀಕ್ಷಿಸಿದ ಡಾಕ್ಟರ್ ಮುಖದಲ್ಲಿ ನಿರಾಶೆ ಇತ್ತು. ಹಸುವಿಗೆ ಏನು ಕೊಟ್ಟಿದ್ದೀರಿ, ಎಲ್ಲಿ ಮೇಯಲು ಬಿಡುತ್ತೀರಿ ಸಾವಿತ್ರಿಯನ್ನು ಕೇಳಿದರು. ಆಕೆ ಪಕ್ಕದ ಖಾಲಿ ಜಾಗವನ್ನು ತೋರಿಸಿದಳು. ಡಾಕ್ಟರ್, ಕೃಷ್ಣಪ್ಪರನ್ನು ಕರೆದುಕೊಂಡು ಹೋದರು. ಖಾಲಿ ಜಾಗದ ಮೂಲೆ ಸುತ್ತಲ ಮನೆಯವರಿಗೆ ಕಸ ಎಸೆಯುವ ತೊಟ್ಟಿಯಾಗಿತ್ತು. ಪ್ಲಾಸ್ಟಿಕ್ ಕವರುಗಳು, ತಿಂಡಿಯ ಅವಶೇಷಗಳು, ನೀರಿನ ಖಾಲಿ ಬಾಟಲುಗಳು ರಾಶಿ ರಾಶಿ ಬಿದ್ದಿದ್ದವು.

ಡಾಕ್ಟರ್, ಕೃಷ್ಣಪ್ಪಗೆ, 'ಹಸುಗೆ ಪ್ಲಾಸ್ಟಿಕ್ ಕವರ್ಸ್‌ನಲ್ಲಿ ಸಿಗೋ ಅನ್ನ, ತಿಂಡಿ ತಿಂದು ರೂಢಿಯಾಗಿರ್ಬೇಕು. ಅದ್ರ ಆಸೆಗೆ ಪ್ಲಾಸ್ಟಿಕ್ ಕವರೂ ನುಂಗಿ ಬಿಟ್ಟಿರತ್ತೆ. ಅದು ಜೀರ್ಣ ಆಗಲ್ಲ. ಕರುಳಲ್ಲಿ ಸಿಕ್ಕಾಕೊಂಡಿರ್ತದೆ' ಎಂದರು.

'ಅದಕ್ಕೇನು ಮಾಡಬೇಕು ಡಾಕ್ಟ್ರೇ?'

'ಅಪ್ರೇಶನ್ ಮಾಡಿ ಪ್ಲಾಸ್ಟಿಕ್ಸ್ ತೆಗೀಬೇಕು. ಅದೇನೂ ಸುಲ್ಬ ಅಲ್ಲ. ಹಸು ಉಳೀತದೋ ಇಲ್ಲೋ ಹೇಳೋಕಾಗಲ್ಲ'

'ಬೇರೆ ದಾರಿ ಇಲ್ವಾ ?'

'ಔಷಧಿಯಿಂದ ಕರಗಲ್ಲ. ಆಪ್ರೇಶನ್ ಮಾಡ್‌ದಿದ್ರೆ ಹಸು ತಿನ್ನೋದೇ ಇಲ್ಲ'

ಡಾಕ್ಟರ್ ಮಾತಿನಿಂದ ಸಾವಿತ್ರಿಯ ಕಣ್ಣಲ್ಲಿ ನೀರು ಬಂತು. ಮಗಳು ಮಂಕಾಗಿದ್ದಳು.

ಹಸುವನ್ನು ಪಶು ಆಸ್ಪತ್ರೆಗೆ ಸಾಗಿಸಿದರು. ಸಾವಿತ್ರಿಗೆ ಧೈರ್ಯ ತಂಬಲು ಕೃಷ್ಣಪ್ಪರೂ ಇದ್ದರು. ಡಾಕ್ಟರ್ ಆಪರೇಷನ್ ಮಾಡಿ ಹಸುವಿನ ಹೊಟ್ಟೆಯಿಂದ ಒಂದು ಮೂಟೆಯಷ್ಟು ಪ್ಲಾಸ್ಟಿಕ್ ಹೊರ ತೆಗೆದರು. ಬಗೆಬಗೆಯ ಪ್ಲಾಸ್ಟಿಕ್ ಶೀಟ್ಸ್, ಕವರ್ಸ್, ಪ್ಯಾಕೆಟ್ಸ್, ಗಂಟುಗಂಟಾಗಿ, ಅಂಟುಅಂಟಾಗಿ ಹೊಟ್ಟೆಯಲ್ಲಿ ಸುತ್ತಿಕೊಂಡಿತ್ತು. ಆಪರೇಷನ್ ಮಾಡಿದ ನಂತರ ಹಸು ಚೇತರಿಸಿಕೊಂಡಿತು. ನೀರು ಕುಡಿಯಿತು. ಇನ್ನೇನು ಹುಷಾರಾಗುತ್ತೆ ಎಂದುಕೊಂಡರು. ಮೆಲುಕು ಹಾಕುತ್ತಿದ್ದಂತೆ ಕುಸಿದು ಬಿತ್ತು. ಕಣ್ಣುಗಳು ಅಗಲವಾಗಿ ತೆರೆದುಕೊಂಡವು. ಕೆಲವೇ ಕ್ಷಣಗಳಲ್ಲಿ ಅಸುನೀಗಿತು.

ಸಾವಿತ್ರಿಯ ಗೋಳಾಟ ಹೇಳತೀರದು. ಅವಳ ಕನಸು ಬತ್ತಿ ಹೋಗಿತ್ತು. ಕೃಷ್ಣಪ್ಪಗೆ ಸಮಾಧಾನ ಮಾಡಿ ಮನೆಗೆ ಕಳಿಸಲು ಸಾಕು ಸಾಕಾಯಿತು. ಕೃಷ್ಣಪ್ಪಗೆ ತುಂಬಾ ಬೇಸರವಾಗಿತ್ತು. ಮನೆಗೆ ಹೋಗಿ ಸಾಂತ್ವನ ಹೇಳ ಬಯಸಿದರೂ ಸಮಾಜಕ್ಕೆ ಅಂಜಿ ತಡೆದುಕೊಂಡರು. ಡಾಕ್ಟರ್ ಹತ್ತಿರ ಮೃತ್ಯುಪತ್ರ ಸಿದ್ಧ ಪಡಿಸಿ, ಇನ್ಶುರೆನ್ಸ್ ಕಂಪನಿಗೆ ಫೋನ್ ಮಾಡಿ ಇನ್ಶುರೆನ್ಸ್ ಹಣ ಆದಷ್ಟು ಬೇಗ ಪಾವತಿಸಲು ವಿನಂತಿಸಿದರು.

ಕೆಲವು ತಿಂಗಳು ಸಾವಿತ್ರಿ ಕಾಣಿಸಲೇ ಇಲ್ಲ. ನಿಯಮಗಳ ಪ್ರಕಾರ ಎರಡು ಹಸುಗಳಿಗೆ ಸಾಲ ಮಂಜೂರಾಗುತ್ತದೆ. ಒಂದು ಹಸು ಹಾಲು ಕೊಡುವುದು ನಿಲ್ಲಿಸಿದಾಗ ಇನ್ನೊಂದು ಕರೆಯಲು ಸಿದ್ಧವಾಗಿರಬೇಕೆನ್ನುವುದು ಇದರ ಉದ್ದೇಶ. ಸಾವಿತ್ರಿಗೆ ಇನ್ನೊಂದು ಹಸುವನ್ನು ಸಾಕಬಹುದು ಎನ್ನುವುದನ್ನು ತಿಳಿಸಿ ಹೇಳಬೇಕಿತ್ತು. ಖಾನಾವಳಿಗೆ ಹೋಗಿ, 'ಬ್ಯಾಂಕಿಗೆ ಬನ್ನಿ' ಎಂದು ಕರೆದರು. ಅವಳು ಬಂದಾಗ ಸಾಲ ಇನ್ಶುರೆನ್ಸ್ ದುಡ್ಡಿಂದ ತೀರಿದೆ ಎಂದರು. ಅವಳಿಗೆ ಸಂತೋಷವಾಯಿತು. ಇನ್ನೊಂದು ಹಸು ಸಾಕುವ ಮನಸ್ಸಿದ್ದರೆ ತಿಳಿಸಿ ಎಂದಾಗ ಆಕೆಗೆ ಆಶ್ಚರ್ಯವಾಯಿತು. ಗೊಂದಲದಲ್ಲಿದ್ದ ಆಕೆ ಯೋಚನೆ ಮಾಡಿ ಹೇಳುತ್ತೇನೆ ಎಂದಳು.

ಮೂರ್ನಾಲ್ಕು ದಿನ ಬಿಟ್ಟು ಬ್ಯಾಂಕಿಗೆ ಬಂದ ಸಾವಿತ್ರಿ ಹುರುಪಲ್ಲಿದ್ದಳು.

'ಅಯ್ನೋರ ಹಸು ಮಾರ್ತಾರಂತೆ. ಖಾನಾವಳಿಲೀ ಮಾತಾಡ್ತಿದ್ರು' ಎಂದಳು. ಮೂರು ತಿಂಗಳ ಹೆಣ್ಣು ಕರು ಇದೆ, ಚೆನ್ನಾಗಿ ಹಾಲು ಕೊಡುತ್ತಿದೆ ಎನ್ನುವುದನ್ನು ಕೇಳಿ ಅವಳಲ್ಲಿ ಆಸೆ ಹುಟ್ಟಿತ್ತು.

'ರೇಟು ಎಷ್ಟು ?'

'ಗೊತ್ತಿಲ್ಲ ಸಾರ್, ಜಾಸ್ತಿ ಇರ್ಬೇಕು'

'ನೀವೇ ವಿಚಾರಿಸಿಕೊಂಡು ಬನ್ನಿ'

'ಅಯ್ನೋ ನಮ್ಮೆಲ್ಲ ಸೇರಿಸ್ತಾರಾ ಸಾರ್, ನೀವೇ